1	2	3	4
15	ಮೈಸೂರು	3862	13517000
16	ಧಾರವಾಡ	664	2324000
17	ಶಿವಮೊಗ್ಗ	660	2310000
18	ಚಿಕ್ಕಮಗಳೂರು	60	210000
19	ಮಂಡ್ಯ	920	3220000
20	ಯಾದಗೀರ್	120	420000
		20539	**71886500**

ನಾಲೆಯ ಮೇಲ್ಗಾಲುವೆ ಒಡೆದು ಹೋಗಿರುವುದು

311 (72) ಶ್ರೀಮತಿ ಕಲ್ಪನಾ ಸಿದ್ದರಾಜು (ಮದ್ದೂರು): ಮಾನ್ಯ ಜನಸಂಪನ್ಮೂಲ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮಂಡ್ಯ ಜಿಲ್ಲೆ, ಮದ್ದೂರು ತಾಲ್ಲೂಕು, ಸೂಳೆಕೆರೆ ದಕ್ಷಿಣ ನಾಲೆಯ ಮೇಲ್ಗಾಲುವೆ ಇತ್ತೀಚೆಗೆ ಒಡೆದುಹೋಗಿದ್ದು, ಇದರಿಂದ ಸಾವಿರಾರು ರೈತರ ಬೆಳೆಗಳಿಗೆ ಹಾನಿಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಹಾಗಿದ್ದಲ್ಲಿ ಈ ಮೇಲ್ಗಾಲುವೆಯನ್ನು ಹೊಸದಾಗಿ ನಿರ್ಮಾಣ ಮಾಡಲು ಸರ್ಕಾರ ಕ್ರಮ ಕೈಗೊಂಡಿದೆಯೇ;

ಇ) ಹಾಗಿದ್ದಲ್ಲಿ ಈ ಮೇಲ್ಗಾಲುವೆ ನಿರ್ಮಾಣಕ್ಕಾಗಿ ಅನುದಾನವನ್ನು ನಿಗದಿಪಡಿಸಿ ಬಿಡುಗಡೆ ಮಾಡಲಾಗಿದೆಯೇ;

ಈ) ಮಾಡಿದ್ದಲ್ಲಿ, ಹೊಸದಾಗಿ ಮೇಲ್ಗಾಲುವೆ ಕಾಮಗಾರಿಯನ್ನು ಯಾವಾಗ ಕೈಗೆತ್ತಿಕೊಳ್ಳಲಾಗುವುದು; (ಮಾಹಿತಿ ನೀಡುವುದು)?

ಶ್ರೀ ಬಸವರಾಜ ಬೊಮ್ಮಾಯಿ (ಜಲಸಂಪನ್ಮೂಲ ಸಚಿವರು):

ಅ) ಮಂಡ್ಯ ಜಿಲ್ಲೆ ಮದ್ದೂರು ತಾಲ್ಲೂಕು, ಸೂಳೆಕೆರೆ ದಕ್ಷಿಣ ನಾಲೆಯ ಮೇಲ್ಗಾಲುವೆ ಗೋಡೆಗಳು ದಿನಾಂಕ: 07.01.2001ರಂದು ಒಡೆದಿರುತ್ತದೆ. ಇದರಿಂದ ಬೆಳೆಗಳಿಗೆ ಯಾವುದೇ ಹಾನಿಯಾಗಿರುವುದಿಲ್ಲ. ಒಡೆದು ಹೋಗಿದ್ದ ಮೇಲ್ಗಾಲುವೆಯ ಗೋಡೆಗಳನ್ನು ದುರಸ್ಥಿಗೊಳಿಸುವ ಕಾಮಗಾರಿಯನ್ನು ದಿನಾಂಕ: 31.01.2011ರಂದು ಪೂರ್ಣಗೊಳಿಸಲಾಗಿರುತ್ತದೆ.

ಈ ಕಾಲುವೆಯಡಿಯಲ್ಲಿ ಬರುವ ಅಚ್ಚುಕಟ್ಟಿಗೆ (3,725 ಎಕರೆ) ಪರ್ಯಾಯವಾಗಿ ಬಲಭಾಗದ ಮೇಲ್ಮಟ್ಟದ ನಾಲೆಯಿಂದ ಹಾಗೂ ಹೆಬ್ಬಳ ಚೆನ್ನಯ್ಯ ಆಲೆಯ ಸ್ಕವರ್ ಸ್ಲ್ಯೂಯಿಸ್‌ನಿಂದ ನೀರನ್ನು ಪೂರೈಸಿ ಬೆಳೆಗಳು ಹಾನಿಯಾಗದಂತೆ ಕ್ರಮ ಕೈಗೊಳ್ಳಲಾಗಿದೆ.

ಆ) ಒಡೆದುಹೋಗಿದ್ದ ಮೇಲ್ಗಾಲುವೆಯ ಗೋಡೆಗಳನ್ನು ಈಗಾಗಲೇ ದುರಸ್ಥಿಗೊಳಿಸುತ್ತಿದ್ದು, ಅಚ್ಚುಕಟ್ಟಿಗೆ ಸಮರ್ಪಕವಾಗಿ ನೀರೊದಗಿಸುತ್ತಿರುವುದರಿಂದ ಹೊಸದಾಗಿ ಮೇಲ್ಗಾಲುವೆಯನ್ನು ನಿರ್ಮಾಣ ಮಾಡುವ ಪ್ರಸ್ತಾವನೆ ಸಧ್ಯಕ್ಕೆ ಇರುವುದಿಲ್ಲ.

ಇ) ಹೊಸದಾಗಿ ಮೇಲ್ಗಾಲುವೆಯನ್ನು ನಿರ್ಮಾಣ ಮಾಡುವ ಸಲುವಾಗಿ ಯಾವುದೇ ಅನುದಾನವನ್ನು ನಿಗದಿಪಡಿಸಿರುವುದಿಲ್ಲ.

ಈ) ಉದ್ಭವಿಸುವುದಿಲ್ಲ.

ಸರ್ವೆ ಕಾರ್ಯ ವಿಳಂಬವಾಗುತ್ತಿರುವುದು

312 (73) ಶ್ರೀಮತಿ ಕಲ್ಪನಾ ಸಿದ್ದರಾಜು (ಮದ್ದೂರು): ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮದ್ದೂರು ತಾಲ್ಲೂಕಿನ ವ್ಯಾಪ್ತಿಯಲ್ಲಿನ ರೈತರ ಜಮೀನುಗಳ ಸರ್ವೆ ಕಾರ್ಯವು ವಿಳಂಬವಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಹಾಗಿದ್ದಲ್ಲಿ, ಈ ವಿಳಂಬಕ್ಕೆ ಕಾರಣಗಳೇನು;

ಇ) ಈ ರೀತಿಯ ವಿಳಂಬಕ್ಕೆ ಕಾರಣರಾಗಿರುವ ಅಧಿಕಾರಿಗಳ ವಿರುದ್ಧ ಸರ್ಕಾರ ಕ್ರಮ ಕೈಗೊಂಡಿದೆಯೇ, ಹಾಗಿದ್ದಲ್ಲಿ ಕ್ರಮಗಳಾವುವು;

ಈ) ರೈತರ ಜಮೀನಿನ ಸರ್ವೆ ಕಾರ್ಯವನ್ನು ತ್ವರಿತಗತಿಯಲ್ಲಿ ಪೂರ್ಣಗೊಳಿಸಲು ಹೊಸ ಸರ್ವೆಯರ್‌ಗಳನ್ನು ನೇಮಿಸಿಕೊಳ್ಳುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ;

ಉ) ಹಾಗಿದ್ದಲ್ಲಿ ಯಾವಾಗ ನೇಮಿಸಿಕೊಳ್ಳಲಾಗುವುದು?

ಶ್ರೀ ಕರುಣಾಕರ ರೆಡ್ಡಿ (ಕಂದಾಯ ಸಚಿವರು):

ಅ) ಬಂದಿದೆ.

ಆ) ವಿಳಂಬಕ್ಕೆ ಬಹುಮುಖ್ಯ ಕಾರಣಗಳು

1. ಮದ್ದೂರು ತಾಲ್ಲೂಕಿನಲ್ಲಿರುವ ಸರ್ವೆ ಕಾರ್ಯಕ್ಕೆ ಒಟ್ಟು 5083 ಪ್ರಕರಣಗಳು ಬಾಕಿ ಇದ್ದು, ಹಾಲಿಯಿರುವ 8 ಜನ ಸರ್ಕಾರಿ ಭೂಮಾಪಕರು ಮತ್ತು 11 ಜನ ಪರವಾನಗಿ ಭೂಮಾಪಕರುಗಳಿಂದ ಅತಿ ಶೀಘ್ರವಾಗಿ ಇತ್ಯರ್ಥಪಡಿಸಲು ಸಾಧ್ಯವಿಲ್ಲವಾಗಿದೆ.